
ಯಾರಿಗೆ ಕೇಳುವುದು ಅಂದುಕೊಂಡ ಅವಳಿಗೆ ಕಳೆದ ವರ್ಷ ಮೀರಾಗೆ ಸರ್ಪ ಸುತ್ತು ಆಗಿದ್ದು ನೆನಪಾಯ್ತು. 'ಈಗೇನು ಮಾಡ್ಲಿ?' ಅಂದುಕೊಂಡಳು. ಮಗಳು ಶ್ಯಾಮಲಿಗೆ ಹೋಗಿ ಕೇಳಿ ಬರಲು ಹೇಳಿದರೆ, 'ಅವ್ವಾ, ಕಜ್ಜಿ ತರ್ಸದೇ ಹಿಂಗಾಗಿದು ಅಂದ್ರೆ ಗುತ್ತಾತಿದೇನೆ? ನೀನೇ ಹೋಗ್ಬಾ. ನಾ ಹೋಗುಕಲಾ.' ಅಂದುಬಿಟ್ಟಳು. ಬೇರೆ ಉಪಾಯ ಇರಲಿಲ್ಲ. ನಿಧಾನಕ್ಕೆ ಹೆಜ್ಜೆ ಹಾಕುತ್ತ ಮೀರಾ ಮನೆಗೆ ನಡೆದಳು. ಸಂಜೆ ಹೊತ್ತು ಅಂಗಳದ ಅಂಚಿಗೆ ಕೂತು ತಲೆ ಬಾಚಿಕೊಳ್ಳುತ್ತಿದ್ದ ಮೀರಾಗೆ ಶಾಲುನ ನೋಡಿ ಆಶ್ಚರ್ಯವಾಯ್ತು. ಆದರೂ, 'ಬಾ ಶಾಲಕ್ಕ, ತಲೀಗಿ ಮಿಂದಿದ್ನೆ. ಹ್ವಾದ



ವಾರನೂ ತಲೀಗೆ ಮೀಯುಕಿ ಆಗಿಲ್ಲಾಗಿತ್ತು' ಎನ್ನುತ್ತಾ ಬಿಚ್ಚಿದ ಕೂದಲನ್ನು ಮುಡಿಕಟ್ಟಿಕೊಂಡಳು. ಆವತ್ತಿನ ಘಟನೆ ನೆನಪೇ ಇಲ್ಲದಂತೆ ಖುಷಿಯಿಂದ ಬರಮಾಡಿಕೊಂಡಳು. ಶಾಲೂಗೆ ಒಂದು ನಮೂನಿ ಇರುಸು ಮುರುಸಾಗತೊಡಗಿತ್ತು.

'ಮೀರಾ, ತಪ್ಪಾಯ್ತೆ ನಂದು. ಆ ದಿನ ನಿಂಗೆ ಹಂಗೇ ಹೇಳುಕಿಲ್ಲಾಗಿತೇ ನಾನು. ಈಗೀಗೆ ಬ್ಯಾರೆ ಯಾರರೂ ಖುಷಿಯಿಂದಿದ್ರೆ ನಂಗೊಂದ ನಮೂನಿ ಆತಿದು. ಇದೆಂಥಾ ರೋಗ ನಂಗಿ ಬಡ್ಕಂಡಿದು ಅಂದ್ಕತಿನೇ, ಆದ್ರೂ ನನ್ನ ಬುದ್ಧಿನೇ ಸರಿ ಇಲ್ಲ ಕಾಣ್ತೆ, ಹಂಗಾಗೀ ಈಗೀಗ ಬಾಯ್‌ಗೂ ಹಿಡ್ತ ಸಿಕ್ಕುಕಲಾ' ಅಂದಳು ಶಾಲೂ. 'ಹಾ! ಆಯ್ತು ಬಿಡೇ! ನಾನೇನು ಅದನ್ನೆ ತಲೀಗೆ ಹಚ್ಕಕಂಡಿ ಮಾಡಿ ನೀನು. ನಂಗೂ ಹಾಂಗೆಯಾ ಬಾಳ ಕರ್ಕಿರಿ ಆತೇ ಬಿದ್ದಿದು. ದಾಕದರ ಕಡಿಗೆ ಹೋಗಿ ಬಂದಿ ಮೊನ್ನೆಗೀ. ಅದೇನೇ ಮುಟ್ಟು ನಿಲ್ಲುಕಾಗೀದು, ರಕ್ತ ಕಮ್ಮಿಯಾಗಿದು ಅಂತೇ ಮೂರ ನಮೂನಿ ಗುಳಿಗೇ ಕುಟ್ಟಿರು. ಆದ್ರೂ ಶಾಲಕ್ಕ! ಆ ದಿನ ಬೇಜಾರಾಗಿತ್ತೇ. ಶಾಲಕ್ಕ ನಂಗ್ಯಾಕಿ ಹಿಂಗೆ ಹೇಳ್ತು. ನಾನೇನು ಅದರ ಗಂಟ ತಿಂದಿದ್ನೆ. ಯಾರದೋ ಸಿಟ್ಟು ತಂಗಡಿ ಬಂದಿ ನಂಗೆ ಹೇಳುಕೆ ಏನಗಿತ ಇದ್ಕ ಅಂದಕಂಡಿ ರಾತ್ರಿ ಮನಗದೋಳು ತಿಡ್ದೇ ತಿಡ್ದೇ. ರಾತ್ರಿ ಹಿಂಗೂ ಕಣ್ಣು ಮುಚ್ಚಲೇ ಇಲ್ಲವೇ! ಆದರೆ ನೋಡು ನಿಂಗೇ ನಾನಂದ್ರಿ ಆತಿದು ಅಂಬುದ್ಕ, ಈಗೆ ನಿಂಗೆ ಹ್ಯಾಂಗೇ ಗುತ್ತಾಯ್ತು ನೋಡು!' ಎಂದು ಇಬ್ಬರೂ ಸಮಾಧಾನಿಸಿಕೊಂಡರು.. ದೂರದೂರಿನ ಬೆಳಂಬಾರದಲ್ಲಿ ಗಾಂವಟಿ ಔಷಧಿ ಸಿಗುತ್ತದೆ ಎಂದೂ ತನಗೆ ಅದರಿಂದಲೆ ಕಡಿಮೆ ಆಯ್ತೆಂದು ಹೇಳಿದಳು.

ಇದಾಗಿ ಏಳೆಂಟು ದಿನ ಕಳೆದಿತ್ತು. ಮಳೆ ಮತ್ತೆ ಜಪ್ಪರಿಸಿ ಸುರಿಯತೊಡಗಿತ್ತು. ಮೀನುಗಾರರು ಕಡಲಿಗಿಳಿಯಲಿಲ್ಲ. ಹಾಗಾಗಿ ಮೀನು ಬರದೇ ವಾರವಾಗಿತ್ತು. ಒಣಬಂಗುಡೆ ಸಾರು ಮಾಡುವುದೆಂದು ಕೊಂಡಳು ಮೀರಾ. ಒಣಮೀನು ನೆನೆಹಾಕಿ, ಕಾಯಿ ತುರಿದು, ಮೆಣಸು, ಕೊತ್ತಂಬರಿ ಬೀಜ, ಚೂರು ಅರಸಿನ ಕೊಂಬು, ವಾಂಟೆಕಾಯಿ ಹುಳಿ ಎಲ್ಲ ಬೆರೆಸುತ್ತಿದ್ದಾಗ ಬೆಳ್ಳುಳ್ಳಿ ಇಲ್ಲದ್ದು ನೆನಪಾಯ್ತು. ಹೋ. ಘಾತ ಆತು! ಎನ್ನುತ್ತಾ, ಸಣ್ಣಗೆ ಜಿಟಿಜಿಟಿ ಸುರಿಯುತ್ತಿರುವ ಮಳೆಯಲ್ಲೇ ಶಾಲು ಮನೆ ಕಡೆ ಬೆಳ್ಳುಳ್ಳಿಗೆ ಹೋದರೆ, ಶಾಲೂ ಬೆಟ್ಟಕ್ಕೆ ಹೋದವಳು ಬಂದಿರಲಿಲ್ಲ.

'ಹಾಳಾಗ್ಲೀ! ಎಲ್ಲರೂ ಬೆಟ್ಟಕ್ಕೆ ಹೋಗಿರೇನೋ ಇಟ್ಟೊತ್ತ್ಗೇ, ತೆಂಗಿನ ಮಡಗಿ ಬುಡಕ್ಕೆ ಹಾಕುಕೆ ಸೊಪ್ಪಿನ ಹೊರೆ ತಕಂಬರುಕೆ. ನಾನೊಬ್ಬಳ್ಳೆ ಮನೀಲೀ ಬಿದ್ದಿ. ಹೊರೆ ಸೊಪ್ಪು ತರುಕಾತಿತು. ದನಕ್ಕೆ ಕಾಲಬುಡ್ಕರೂ ಆತೀತು' ಎಂದುಕೊಳ್ಳುತ್ತಾ ತನ್ನ ಆಚೆಮನೆಯ ಬೀರಮ್ಮಕ್ಕನ ಮನೆ ಕಡೆ ಹೋದಳು. ಹೊರಗೆ ಬೈಕೊಂದು ನಿಂತಿತ್ತು. ಮಳೆ ಹೊಯ್ಯುತ್ತಲೆ ಇತ್ತು. ಬಾಗಿಲು ಹಾಗೆ ಮುಚ್ಚಿತ್ತು. ಒಂದರೆಗಳಿಗೆ ನಿಂತವಳಿಗೆ ಒಳ ಹೋಗುವುದೇ ಸರಿ ಎನ್ನಿಸಿತು. ಜಗುಲಿಯಲ್ಲಿ ಬೀರಮ್ಮಕ್ಕನ ಮಗಳು ಬೇಬಿ ತನ್ನ ಉದ್ದನೆಯ ಕೂದಲನ್ನು ಬಿಚ್ಚಿ ಬೆರಳಾಡಿಸಿಕೊಳ್ಳುತ್ತಾ ನಿಂತಿದ್ದಳು. ಅವಳ ಬೆನ್ನು ಬಾಗಿಲಿಗೆ ಇದ್ದರೆ ಜಗುಲಿಯ ಮಂಚದ ಮೇಲೆ ಪ್ರಾಯದ ಹುಡುಗನೊಬ್ಬ ಕೂತಿದ್ದ. ನಮ್ಮ